ನಾನೊಬ್ಬ ಚಿಕ್ಕಮಕ್ಕಳ ತಂದೆಯಾಗಿ ಮಕ್ಕಳ ಎದುರು ಹೆಂಡತಿಯನ್ನು ಎರಡನೇ ದರ್ಜೆಯವಳು ಎಂದು ನಡೆಸಿಕೊಳ್ಳುತ್ತಿದ್ದರೆ, ಹೆಂಡತಿಯೂ ನಾನು ಗಂಡನಿಗೆ ಅಧೀನ ಎಂದು ನಡೆದುಕೊಳ್ಳುತ್ತಿದ್ದರೆ, ಅದನ್ನು ನೋಡುತ್ತಾ ಬೆಳೆವ ಮಗಳಲ್ಲಿ ‘ಹೆಣ್ಣು’ ಎನ್ನುವ ಭಾವನೆಯೂ, ಮಗನಲ್ಲಿ ‘ಗಂಡು’ ಎಂಬ ಭಾವನೆ ರೂಪುಗೊಳ್ಳಲು ಪರೋಕ್ಷ ಪ್ರೇರಣೆಯಾಗುತ್ತದೆ. ಮಕ್ಕಳಿಗೆ ಇಡುವ ಹೆಸರಿನಿಂದ ಹಿಡಿದು ಆಟದ ಸಾಮಾನು, ಡ್ರೆಸ್‌ಕೋಡ್‌ಗಳಲ್ಲಿ ಲಿಂಗ ತಟಸ್ಥತೆ ತರಲು ಸಾಧ್ಯವೇ? ಪ್ರಯತ್ನಿಸಬೇಕು. ಗಂಡಿನ ಸಂಕೇತದ ಹೆಸರನ್ನು ಗಂಡುಮಗುವಿಗೂ, ಹೆಣ್ಣಿನ ಸಂಕೇತದ ಹೆಸರನ್ನು ಹೆಣ್ಣುಮಗುವಿಗೂ ಇಟ್ಟಾಗಲೇ ನಾವು ಸಮಾಜದ ಹೆಣ್ಣು–ಗಂಡುಗಳ ಭೇದಕ್ಕೆ ಮಕ್ಕಳನ್ನು ಒಗ್ಗಿಸಲು ಪ್ರಯತ್ನಿಸುತ್ತಿರುತ್ತೇವೆ. ಹಾಗಾಗಿ ಮೊಟ್ಟಮೊದಲಿಗೆ ನಮ್ಮ ನಮ್ಮ ಮನೆಗಳಲ್ಲಿ ನಮ್ಮಿಂದಲೇ ಲಿಂಗತಟಸ್ಥ ವಾತಾವರಣವನ್ನು ರೂಪಿಸುತ್ತಾ ಹೋಗಬೇಕು.

ಮನೆಗಳಲ್ಲಿ ಮಾಡುವ ಸಣ್ಣ ಸಣ್ಣ ಬದಲಾವಣೆಗಳು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಉದಾಹರಣೆಗೆ, ಮನೆಗಳಲ್ಲಿ ತೋರುವಂತೆ ಹಾಕುವ ದೇವರ, ಸಾಧು ಸಂತರ, ರಾಷ್ಟ್ರೀಯ ನಾಯಕರುಗಳ ಚಿತ್ರಗಳಲ್ಲಿ ಗಂಡ–ಹೆಂಡತಿ ಇರುವ ಪಟಗಳನ್ನು ಹಾಕೋಣ. ಕೃಷ್ಣ ರಾಧೆಯನ್ನೋ, ಶಿವ ಪಾರ್ವತಿಯನ್ನೋ, ಬುದ್ಧನ ಜತೆ ಯಶೋಧರೆ, ಗಾಂಧಿ ಜೊತೆ ಕಸ್ತೂರ್ ಬಾ, ಜ್ಯೋತಿಭಾ ಪುಲೆಯ ಜತೆ ಸಾವಿತ್ರಿಭಾಯಿ ಪುಲೆ, ಅಂಬೇಡ್ಕರ್ ಜತೆ ರಮಾಭಾಯಿ ಮತ್ತು ಸವಿತಾ, ಬಸವಣ್ಣನ ಜತೆ ಗಂಗಾಬಿಕೆ ನೀಲಾಂಬಿಕೆ – ಈ ಬಗೆಯ ಫೋಟೊಗಳನ್ನು ಹಾಕೋಣ.

ಮಕ್ಕಳ ಮನಸ್ಸಲ್ಲಿ ಗಂಡು–ಹೆಣ್ಣು ಎನ್ನುವುದರ ಬದಲು ‘ನಾವೆಲ್ಲ ಮನುಷ್ಯರು’ ಎನ್ನುವ ಭಾವನೆ ರೂಪುಗೊಳ್ಳುವಂತೆ ಲಿಂಗತಟಸ್ಥ ಅಥವಾ ಲಿಂಗ ಸಮಾನತೆಯ ಅರಿವನ್ನು ಹಂತಹಂತವಾಗಿ ಬೆಳೆಸುತ್ತಾ ಹೋಗಬೇಕು. ಪ್ರತ್ಯೇಕ ಹುಡುಗ ಹುಡುಗಿಯರ ಕಲಿಕಾ ವ್ಯವಸ್ಥೆಯನ್ನು ರದ್ದುಪಡಿಸುವ ಬಗೆಗೆ ಹಕ್ಕೊತ್ತಾಯಗಳನ್ನು ಮಂಡಿಸುತ್ತಲೇ, ಶಾಲೆಗಳ ಪೇರೆಂಟ್ಸ್ ಮೀಟಿಂಗ್‌ಗಳಲ್ಲಿ ಶಾಲಾ ಪಠ್ಯದಲ್ಲಿರುವ ಲಿಂಗತಾರತಮ್ಯದ ಪಠ್ಯಕ್ರಮವನ್ನು ಬೋಧಿಸದಂತೆ ತಕರಾರು ತೆಗೆಯಬೇಕು. ಅಂತೆಯೇ ಆರೋಗ್ಯಕರವಾಗ ಲೈಂಗಿಕ ಶಿಕ್ಷಣಕ್ಕೆ ಪೋಷಕರು ಒತ್ತಾಯಿಸಬೇಕು. ಹೆಣ್ಣೆಂದರೆ ಭೋಗಿಸುವ ವಸ್ತು ಎಂದು ತೋರಿಸುವ ಎಲ್ಲಾ ಬಗೆಯ ಅಭಿವ್ಯಕ್ತಿಗಳನ್ನು ಇಡೀ ವಾತಾವರಣವೇ ವಿರೋಧಿಸುವಂತಾಗಬೇಕು. ■

# ಹೆಣ್ಣುಮಕ್ಕಳು ಸ್ವಯಂ ಸಮರ್ಥರಾಗಬೇಕು

ಅತ್ಯಾಚಾರದಂತಹ ಪೈಶಾಚಿಕ ಕೃತ್ಯಗಳಿಗೆ ಕಾರಣಗಳೇನು ಎನ್ನುವುದನ್ನು ನಾವು ಅನಾದಿಕಾಲದಿಂದಲೂ ಮನಃಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯ ಸಿದ್ಧಾಂತ, ಆರ್ಥಿಕ ಸಿದ್ಧಾಂತಗಳ ಮೂಲಕ ನೋಡಿದರೂ ಅದಕ್ಕೆ ಉತ್ತರ ಹುಡುಕುವುದು ದುಸ್ತರವಾಗಿದೆ. ಇಡೀ ಸಮಾಜ, ಅದರಲ್ಲೂ ಗಂಡುಪ್ರಾಣಿ ಸಮೂಹ, ಗಂಡು ರಾಜಕಾರಣ ತನ್ನ ಅಂತರಂಗ ಶೋಧನೆ ಮಾಡಿಕೊಳ್ಳದೆ ಹೋದರೆ ಯಾವುದೂ ಸಭ್ಯವಾಗಲಾರದು. ಆದರೆ ಬೆಕ್ಕಿಗೆ ಗಂಟೆ ಕಟ್ಟುವರಾರು ಎಂಬ ಪ್ರಶ್ನೆಯೇ ಪದೇ ಪದೇ ಎದೆಗೊದ್ದು ನಿಲ್ಲುತ್ತಿದೆ. ನಮ್ಮ ರಾಜಕಾರಣದಲ್ಲೇ ಹಾಸುಹೊಕ್ಕಾಗಿರುವ ವಿಕೃತಿ, ದಾಹ, ಭ್ರಷ್ಟತೆ, ಪುರುಷ ಪ್ರಾಧಾನ್ಯ ಎಲ್ಲವೂ ಮೇಳೈಸಿಕೊಂಡ ಕಾರಣವಾಗಿ 70 ವರ್ಷಗಳ ಸ್ವತಂತ್ರ ಭಾರತದಲ್ಲಿ ಅವ್ಯಾಹತವಾಗಿ ಮಹಿಳೆಯರ ಮೇಲೆ ಅತ್ಯಾಚಾರ ನಡೆದರೂ ಅದನ್ನು ಬುಡಮಟ್ಟ ನಿರ್ಮೂಲನ ಮಾಡುವ ಸಂವೇದನಾಶೀಲ ಸೂಚನೆಗಳೂ ಸಿಗುತ್ತಿಲ್ಲ.

ಗಾಂಧೀಜಿ ನಿಜಸ್ವಾತಂತ್ರ್ಯದ ಬಗ್ಗೆ ಪ್ರಸ್ತಾಪಿಸುತ್ತಾ ಮಹಿಳೆ ನಡುರಾತ್ರಿ ಒಬ್ಬಳೇ ಸುರಕ್ಷಿತವಾಗಿ ನೆಲೆ ಸೇರಿದಾಗ ಮಾತ್ರ ಭಾರತ ನಿಜವಾದ ಸ್ವಾತಂತ್ರ್ಯವನ್ನು ಪಡೆದಂತೆ ಎಂಬರ್ಥದ ಮಾತಾಡಿದ್ದರು. ಆದರೆ ಆಗುತ್ತಿರುವುದೇನು? ನಡು ಹಗಲಿನಲ್ಲೇ ಹಸುಳೆ, ಕಂದಮ್ಮ, ಹದಿಹರೆಯ, ಮುಪ್ಪು ಯಾವುದನ್ನೂ ಲೆಕ್ಕಿಸದೆ ಕುಸಂಸ್ಕೃತ ಕಟುಕ ಗಂಡುಗಳು ಧರ್ಮ ಜಾತಿ ಭೇದವಿಲ್ಲದೆ ಕುಕೃತ್ಯಗಳನ್ನು ನಿರಂತರವಾಗಿ ಎಸಗುತ್ತಲೇ ಇದ್ದಾರೆ. ನಮ್ಮ ಶಿಕ್ಷಣದ ಲೋಪವೋ, ಪೋಷಕರ ಕುರುಡು ವ್ಯಾಮೋಹವೋ, ಸಾಮಾಜಿಕ ವಿಚ್ಛಿದ್ರತೆಯ ಫಲವೋ, ನಿರುದ್ಯೋಗ ಸಮಸ್ಯೆಯೋ, ಅತಿ ಲಾಲಸೆಯ ಮನೋವಿಕಾರದ ವಿಷವೋ ಅಥವಾ ಇವೆಲ್ಲವೂ ಒಟ್ಟಾಗಿ ಸೇರಿಕೊಂಡೋ ಅಂತೂ ಇಡೀ ಸಮಾಜದ ಆರೋಗ್ಯವನ್ನೇ ಜಡ್ಡುಗೆಡವುತ್ತಿವೆ. ಭಾವನೆಗಳೇ ಸತ್ತು ಹೋದಂತಿರುವ ಸಮಾಜ ಇದು. ಇಂತಹ ಅಮಾನುಷ ಕ್ರೌರ್ಯದ ಪೆಡಂಭೂತಗಳನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸಬೇಕೆಂಬ ಒತ್ತಡದ ಕೂಗೂ ಕೇಳಿಬರುತ್ತಿದೆ. ಇದು ಸಹಜವೇ. ಆದರೆ ಅದರಾಚೆಗೂ ಸೃಜನಾತ್ಮಕ ಹಾದಿಗಳೇನಾದರೂ ಇವೆಯೇ ಎಂಬ ಶೋಧವೂ ಮುಂಚೂಣಿಗೆ ಬರಬೇಕು. ಆದರೂ ನಾನೇನು ಮಾಡಬಹುದು ಎಂಬ ಹುಡುಕಾಟದಲ್ಲಿ ಕತ್ತಲೆಯ ದಾರಿಯಲ್ಲಿ ದೀಪವೂ ಇಲ್ಲದೆ ಕುರುಡಾಡುತ್ತ ತಡಕುತ್ತಿರುವಂತಹ ಅನುಭವವಾಗುತ್ತಿದೆ. ತತ್ ಕ್ಷಣ ಕಣ್ಣೆದುರು ಮೂಡುವುದು ಅಕ್ಕಮಹಾದೇವಿಯ ಅದ್ಭುತ ಚಿತ್ರ. ಆಕೆ ತನಗೆ ಬೇಕಾದ ಗಂಡನನ್ನು ಅರಸಿ ಹೊರಟವಳು. ಅಪರಿಮಿತ ಸೌಂದರ್ಯರಾಶಿಯಾದ ಆಕೆಗೆ ಅನುರೂಪನಾದ ಗಂಡ ಚನ್ನಮಲ್ಲಿಕಾರ್ಜುನನಲ್ಲದೆ ಅನ್ಯಗಂಡರಲ್ಲ. ಅವನೋ ಅಪ್ರತಿಮ ಚಲುವ. ಅಕ್ಕನ ಈ ಹುಡುಕಾಟ ಏಕಾಂಗಿಯಾದುದು. ಆಕೆಯ ಧೈರ್ಯ, ಆಕೆಯ ಅರಿವು, ಆಕೆಯ ಪ್ರತಿಭಟನೆಯ ನೆಲೆ, ಕವಿಯ ಒಳನೋಟ ಈ ಎಲ್ಲದರ ಸಾಕಾರಮೂರ್ತಿ ಅವಳು. ನಮ್ಮ ಇಂದಿನ ಹೆಣ್ಣುಮಕ್ಕಳಿಗೆ ಆಕೆ ಮಾದರಿಯಾದರೆ ಮಾತ್ರ ಆಧುನಿಕ ಸಮಾಜದಲ್ಲಿ ನಡೆಯುತ್ತಿರುವ ಗಂಡು ಪಾಶವೀಕೃತ್ಯಕ್ಕೆ ಅಂತ್ಯ ಸಿಕ್ಕಬಹುದೋ ಏನೋ. ಅಕ್ಕನಂತೆ ಮಹಿಳೆಯೇ ಸ್ವಯಂ ಸಮರ್ಥೆಯಾಗದಿದ್ದರೆ ಸಂವೇದನಾಶೀಲತೆಯನ್ನೇ ಕಳೆದುಕೊಂಡಿರುವ ಗಂಡುನೋಟದ ಒರಟು ನಡೆಗೆ ಕೊನೆ ಹೇಳುವುದು ಕಷ್ಟ.



ಕಾಯಿದೆಗಳು ಹಾಳೆಯ ಮೇಲೆ ಆಶಾದಾಯಕವಾಗಿ ಕಂಗೊಳಿಸುವುದೇನೋ ನಿಜ. ಆದರೆ ಅವುಗಳ ಅನುಷ್ಠಾನ ಮಾತ್ರ ಸೊನ್ನೆ ಗಾತ್ರದ್ದು. ಅದರಲ್ಲೂ ಚರ್ಮವೇ ರಟ್ಟಿನಂತಾಗಿರುವ ನಮ್ಮ ಭಾರತೀಯ ಸಮಾಜದಲ್ಲಿ ಕಾಯಿದೆಗಳ ಪ್ರಾಮಾಣಿಕ ಜಾರಿ ಅನುಮಾನವೇ. ತೆಲಂಗಾಣದ ಘಟನೆಯಲ್ಲಿ ಪೊಲೀಸರ ನಿಷ್ಕ್ರಿಯತೆಯೂ ಪ್ರಸ್ತಾಪವಾಗಿ ನಂತರ ಕೆಲವು ಪೊಲೀಸರನ್ನು ಅಮಾನತುಗೊಳಿಸಲಾಗಿದೆ. ಪ್ರಯೋಜನವಾದರೂ ಏನು? ಹೋದ ಜೀವವನ್ನು ಮರಳಿ ತರಲಾದೀತೆ. ಅಧಿಕಾರಿಗಳ ಕರ್ತವ್ಯಪ್ರಜ್ಞೆ ಸದಾ ಜಾಗೃತವಾಗಿದ್ದಾಗ ಮಾತ್ರ ಕಾಯಿದೆಗೆ ಜೀವ ಬರಬಲ್ಲದು. ಆದರೆ ಅದು ಇಂದಿನ ಭಾರತದಲ್ಲಿ ಸಾಧ್ಯವೇ? ಸಂವಿಧಾನ ಶಿಲ್ಪಿ ಅಂಬೇಡ್ಕರ್ ಹೇಳಿದ್ದರು – ‘ಸಂವಿಧಾನದ ಅರ್ಥಪೂರ್ಣತೆ ಅದು ಯಾರ ಕೈಯಲ್ಲಿದೆ ಎನ್ನುವುದನ್ನು ಅವಲಂಬಿಸಿದೆ’ ಎಂದು. ನಿಜಕ್ಕೂ ನಾವು ನಮ್ಮ ಕೈಯಲ್ಲಿರುವ ಸಂವಿಧಾನಕ್ಕೆ ನಿಷ್ಠರಾಗಿದ್ದೇವೆಯೇ?. ನಮ್ಮ ನಮ್ಮ ಒಳಗನ್ನು ನೋಡಿಕೊಂಡರೆ ಗೊತ್ತಾಗುತ್ತದೆ!

**–ಚಂದ್ರಶೇಖರ ತಾಳ್ಯ, ಕವಿ**